

ಮೋಹನದಾಸ ಸಿನಿಮಾದಲ್ಲಿ ಪರಮಸ್ವಾಮಿ ಹಾಗೂ ಶ್ರುತಿ



ಸಿನಿಮಾ ಚಿತ್ರೀಕರಣದ ವೇಳೆ ನಿರ್ದೇಶಕ ಪಿ. ಶೇಷಾದ್ರಿ ಹಾಗೂ ಜಿ.ಎಸ್.ಭಾಸ್ಕರ್

## ನಾವೆಲ್ಲಿ ತಪ್ಪಿದ್ದೇವೆ?

ಬೊಳುವಾರು ಬರೆದ ಈ ಸಾಲುಗಳು ತುಂಬ ಅರ್ಥಪೂರ್ಣವಾಗಿವೆ: 'ಸ್ವತಂತ್ರ ಭಾರತದ ಆರಂಭದಲ್ಲಿ ಹಿರಿಯರೆಲ್ಲ ಒಮ್ಮತದಿಂದ ದೇಶದ ರಾಜ ರಸ್ತೆಗಳಿಗೆಲ್ಲ ಮಹಾತ್ಮಾಗಾಂಧಿ ಮಾರ್ಗವೆಂದು ಹೆಸರಿಟ್ಟರು. ಕ್ರಮೇಣ ಆ ರಸ್ತೆಗಳಲ್ಲಿ ಕಲ್ಲುಮುಳ್ಳುಗಳೇ ಹೆಚ್ಚು ಎಂದುಕೊಂಡು, ನಯವಾಗಿ ಜಾರಬಲ್ಲ, ಬೇಗ ಗುರಿ ತಲುಪಬಲ್ಲ ಒಳದಾರಿಗಳನ್ನು ಬಳಸಲಾರಂಭಿಸಿದರು. ಹಾಗಾಗಿ, ಹಿರಿಯರ ಕೈ ಹಿಡಿದು ನಡೆದ ನಿಜವಾದ ಗಾಂಧಿ ಮಾರ್ಗದ ಪರಿಚಯ ಆಗಲೇ ಇಲ್ಲ. ಕಿರಿಯರಿಗೆ ಗೊತ್ತಾದ ಗಾಂಧಿ ಮಾರ್ಗವೆಂದರೆ ಎಂ.ಜಿ. ರೋಡು ಮಾತ್ರ!'.

ಅದೇನೇ ಇರಲಿ, ಮತ್ತೆ ಲೇಖನದ ಆರಂಭಕ್ಕೆ ಹೋಗುವೆ. 'ಮೋಹನದಾಸ' ಕಥೆಯನ್ನು ಕ್ಲೇರ್ ಡಾಬಿನ್ ಓದಿ ಸಾಕಷ್ಟು ಸಲಹೆ ಸೂಚನೆಗಳನ್ನು ಕೊಟ್ಟರು. ಬಯೋಪಿಕ್ ಹೇಗಿರಬೇಕು ಎಂಬ ಬಗ್ಗೆ ದೊಡ್ಡ ಪಾಠವನ್ನೇ ಮಾಡಿದರು. ಅವರು ಸೂಚಿಸಿದ ಎಲ್ಲ ಅಂಶಗಳನ್ನು ಚಿತ್ರೀಕರಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅವರ ಹಲವು ಬದಲಾವಣೆಗಳು ಚಿತ್ರಕಥೆಯನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಂತೂ ಸತ್ಯ. ಚಿತ್ರಕಥೆ ಹೆಣೆಯುವ ಸಂದರ್ಭದಲ್ಲಿ ಸಂದರ್ಭಾನುಸಾರ ಕಲ್ಪನೆಯೊಡಗೂಡಿದ ಸಂವೇದನೆಗಳನ್ನು ಆಶ್ರಯಿಸಬೇಕಾಗಿ ಬಂದಿತು. ಜೊತೆಯಲ್ಲಿ ಬೊಳುವಾರು, ಜೆ.ಎಂ. ಪ್ರಹ್ಲಾದ್, ಕೃಷ್ಣಮೂರ್ತಿ ಹನೂರು ಇದ್ದರು. ತೀರ ಎಚ್ಚರಿಕೆಯಿಂದ ಕಥೆಯನ್ನು ಡಿಸ್‌ಕ್ಲೇಮರ್‌ನೊಂದಿಗೆ ಅಂತಿಮ ಮಾಡಿದೆ. ಯಾಕೆಂದರೆ ಗಾಂಧಿ ಎಂಬುದು ಬರೀ ವ್ಯಕ್ತಿಯಲ್ಲ!

## 'ಮೋಹನದಾಸ' ಮೂರು ಭಾಷೆಯಲ್ಲಿ

ಚಿತ್ರವನ್ನು ಕನ್ನಡ ಭಾಷೆಯಲ್ಲಷ್ಟೇ ಚಿತ್ರಿಸುವುದಕ್ಕಿಂತ ಹಿಂದಿ–ಇಂಗ್ಲಿಷಿನಲ್ಲಿ ಕೂಡ ತಯಾರಿಸಿದರೆ ಹೇಗೆ ಎಂಬ ಯೋಚನೆ ಬಂತು. ಆದರೆ ಬಂಡವಾಳ? ಸರಿ, ಅದಕ್ಕಾಗಿ ಮುಂಬಯಿ, ದೆಹಲಿ, ದಕ್ಷಿಣ ಆಫ್ರಿಕಾ, ಜರ್ಮನಿ ಮತ್ತು ಆಸ್ಟ್ರೇಲಿಯಾದ ಕೆಲವು ಸಂಸ್ಥೆಗಳೊಂದಿಗೆ ಹಲವು ಸುತ್ತಿನ ಮಾತುಕತೆಗಳಾದವು. ಅವರ ನಿರೀಕ್ಷೆಗಳು, ಅಪೇಕ್ಷೆಗಳನ್ನು ಮುಟ್ಟುವುದು ಅಷ್ಟು ಸುಲಭದ್ದಾಗಿರಲಿಲ್ಲ. ಚಿತ್ರಕಥೆ ಹೀಗೆಯೇ ಇರಬೇಕು, ಸ್ಟೋರಿ ಬೋರ್ಡ್ ತಯಾರಿಸಬೇಕು, ಕಲಾವಿದರು ಯಾರು? ತಂತ್ರಜ್ಞರು ಯಾರು? ಅವರ ಕ್ರೆಡೆನ್ಶಿಯಲ್ಸ್ ಏನು? ಚಿತ್ರೀಕರಣದ ಪ್ಲಾನ್ ಹೇಗೆ? ಬಜೆಟ್ ಎಷ್ಟು? ಯಾಕೆ? ಒಂದೇ, ಎರಡೇ ಅವರ ಪ್ರಶ್ನೆಗಳು? ಇದೆಲ್ಲವೂ ತಿಂಗಳುಗಳಲ್ಲಿ ಮುಗಿಯುವ ವ್ಯವಹಾರದಂತೆ ಕಾಣಿಸಲಿಲ್ಲ. ಆದರೆ ನನಗೇನೂ ಅವಸರವಿರಲಿಲ್ಲ. ಇದೂ ಒಂದು ಅನುಭವ. ಆಗಲಿ ವ್ಯವಸ್ಥಿತವಾಗಿಯೇ ಮಾಡೋಣ ಎಂದು ಸುಮ್ಮನಾದೆ. ಅಷ್ಟರಲ್ಲೇ ಸರ್ಕಾರ ರಾಷ್ಟ್ರಪಿತನ ನೂರೈವತ್ತನೇ ಜನ್ಮಸಂಸ್ಮರಣೆಯನ್ನು ಘೋಷಿಸಿತು.

ಬಾಲ್ಯದ ಕತೆಗೆ ಇದಕ್ಕಿಂತ ಸುಸಂದರ್ಭ ಯಾವುದಿದೆ?

ಮತ್ತೆ 'ಮೋಹನದಾಸ'ನಿಗೆ ಚಾಲನೆ ಸಿಕ್ಕಿತು. ಆದರೆ ನಿರೀಕ್ಷಿತ ಹಣದ ಬೆಂಬಲ ದೊರೆಯಲಿಲ್ಲ. ಚಿತ್ರವನ್ನು ಕೈಬಿಡುವ ಸನ್ನಿವೇಶ ಎದುರಾಯಿತು. ಆಗ ಎಂದಿನಂತೆ ನನ್ನ ನೆರವಿಗೆ ಬಂದವರು ನನ್ನ ಮಿತ್ರರು. ನಾವು ಈ ಹಿಂದೆ ನಿರ್ವಹಿಸುತ್ತಿದ್ದಂತೆ 'ಮಿತ್ರಚಿತ್ರ' ವೃಂದ ಕೈಜೋಡಿಸಿತು. ಯಾವ ಸಂಸ್ಥೆಯ ಬೆಂಬಲವಿಲ್ಲದೆ, ಸರ್ಕಾರದ ಸಹಕಾರ ಕೋರದೆ ನಮ್ಮದೇ ಸಹಕಾರಿ ತತ್ವದೊಂದಿಗೆ ಮೂರೂ ಭಾಷೆಯಲ್ಲಿ ಪ್ರತ್ಯೇಕವಾಗಿ ಈ ಚಿತ್ರವನ್ನು ಚಿತ್ರೀಕರಿಸಿದ ಹೆಮ್ಮೆ ನಮ್ಮದು. ಜಿ.ಎಸ್. ಭಾಸ್ಕರ್ ಛಾಯಾಗ್ರಹಣ, ಪ್ರವೀಣ್ ಗೋಡ್ಖಿಂಡಿ ಸಂಗೀತ, ಕೆಂಪರಾಜ್ ಸಂಕಲನದ ನೆರವು ನೀಡಿ ನನಗೆ ಸಾಥ್ ನೀಡಿದ್ದಾರೆ. ಸಂಪತ್ ನನ್ನ ನಿರ್ಮಾಣದ ಕೆಲಸವನ್ನು ಹಗುರಗೊಳಿಸಿದರು. ನನ್ನೊಂದಿಗೆ ನನ್ನ ಸಹಾಯಕರು, ಕಲಾವಿದರು ತಂತ್ರಜ್ಞರು ಸೇರಿದಂತೆ ಸುಮಾರು ಎಪ್ಪತ್ತಕ್ಕೂ ಹೆಚ್ಚು ಜನ ಶ್ರಮ ಹಾಕಿದ್ದಾರೆ. ಬಾಲಿವುಡ್‌ನ ಅನಂತ ಮಹದೇವನ್, ನಮ್ಮ ಶೃತಿ ಸಹಕಾರ ಕೊಟ್ಟಿದ್ದಾರೆ. ಮಕ್ಕಳು ಪಾತ್ರಧಾರಿಗಳನ್ನಂತೂ ಹಗಲೂ ರಾತ್ರಿ ಗೋಳು ಹೊಯ್ದುಕೊಂಡಿದ್ದೇವೆ. ಹೀಗೆ ಹೇಳುತ್ತಾ ಹೋದರೆ ಚಿತ್ರದ ಚಿತ್ರೀಕರಣ ಕುರಿತ ಅನುಭವಗಳೇ ಒಂದು ಪುಸ್ತಕವಾದೀತು.

ನಮಗಂತೂ ನೂರ ಐವತ್ತು ವರ್ಷಗಳ ಹಿಂದಿನ ಕಾಲಘಟ್ಟವನ್ನು ಹಿಡಿಯುವುದು ತುಂಬ ಕಷ್ಟದ ಕೆಲಸವಾಗಿತ್ತು. ಪೋರಬಂದರ್‌ನ ಮನೆಯ ಸೆಟ್ ಹಾಕುವುದು ಎಂಬ ಯೋಚನೆ ಆರಂಭದಲ್ಲಿತ್ತು. ಆದರೆ ನನಗೆ ಗಾಂಧಿ ಜನಿಸಿದ, ಓಡಾಡಿದ ಜಾಗಗಳಲ್ಲೇ ಈ ಚಿತ್ರದ ಚಿತ್ರೀಕರಣ ಆಗಬೇಕು ಎಂಬ ಹಂಬಲ ಬಲವಾಗಿತ್ತು. ಅದನ್ನು ಹೇಗೋ ಕಷ್ಟಪಟ್ಟು ನಿರ್ವಹಿಸಿದೆವು. ಇದೀಗ ಚಿತ್ರ ಬಿಡುಗಡೆಗೆ ಸಿದ್ಧವಿದೆ.

ಒಟ್ಟಾರೆ ಈ ಚಿತ್ರದ ಅನುಭವ ನಾನು ಗಾಂಧಿಯನ್ನು ಮತ್ತಷ್ಟು ಅರಿಯಲು ಅನುವು ಮಾಡಿಕೊಟ್ಟಿದೆ. ಇದು ಮೋಹನದಾಸನಿಗಷ್ಟೇ ಏಕೆ ಸೀಮಿತಗೊಂಡಿದೆ 'ಮಹಾತ್ಮ'ನತ್ತ ಏಕೆ ಹೋಗಲಿಲ್ಲ ಎಂಬ ಪ್ರಶ್ನೆಯೂ ಹುಟ್ಟಬಹುದು. ನಾನು ಈ ಚಿತ್ರದ ಮೂಲಕ ಹೇಳಹೊರಟಿರುವುದು ಮಹಾತ್ಮನ ಕತೆಯಲ್ಲ; ಮೋಹನದಾಸನೆಂಬ ಒಬ್ಬ ಸಾಮಾನ್ಯ ಬಾಲಕನ ಕತೆ. ಮಹಾತ್ಮನ ಬೇರುಗಳನ್ನು ಇಲ್ಲಿ ಯಾರೂ ಕೂಡ ಹುಡುಕಿಕೊಳ್ಳಬಹುದು. ಗಾಂಧಿಯೇ ಹೇಳುತ್ತಾರಲ್ಲ–

**MY LIFE ; MY MESSAGE**

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in